ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳೇ, ಕೆಲವು ಜಿಲ್ಲಾಧಿಕಾರಿಗಳಿಗೆ ಒಂದು ಕಿವಿ ಮಂದವಾಗಿದ್ದು, ಮತ್ತೊಂದು ಕಿವಿ ಸರಿಯಿರುತ್ತದೆ. ಹಾಗಾಗಿ ಸಭೆಗೆ ಬಂದಾಗ ಅರ್ಧ ಕೇಳುತ್ತಾರೆ, ಅರ್ಧ ಬಿಟ್ಟು ಹೋಗುತ್ತಾರೆ.

ಶ್ರೀ ಸಿದ್ದರಾಮಯ್ಯ: ಈಗ ಎರಡೂ ಕಿವಿಗಳನ್ನು ಸರಿ ಮಾಡಿ ಕೊಳ್ಳುವುದಕ್ಕೆ ಹೇಳಿದ್ದೇವೆ. ಎರಡೂ ಕಿವಿಗಳು ಸರಿಯಾಗದಿದ್ದರೆ ಸರಿಪಡಿಸು ವುದಕ್ಕೆ ಏನು ಕ್ರಮ ಕೈಗೊಳ್ಳಬೇಕೋ ಅದನ್ನು ತೆಗೆದುಕೊಳ್ಳೋಣ. ಮಾನ್ಯ ಶಾಸಕರು ಹೇಳಿದಂತೆ ಸಮಸ್ಯೆಯೇನಾದರೂ ಇದ್ದಲ್ಲಿ ಕರೆಸಿ ಮಾತನಾಡಿ ಸಮಸ್ಯೆಯನ್ನು ಬಗೆಹರಿಸುತ್ತೇವೆ.

ದೊಡ್ಡ ಪ್ರಮಾಣದ ಕೈಗಾರಿಕೆ

41(696) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ(ಭಾಲ್ಕಿ)

ಅ) ಬೀದರ್ ಜಿಲ್ಲೆಯಲ್ಲಿ ಯಾವುದೇ ದೊಡ್ಡ ಪ್ರಮಾಣದ ಕೈಗಾರಿಕೆಯಿಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ನ್ಯಾಷನಲ್ ಇನ್ವಾಸ್ಟ್ರಕ್ಚರ್ ಮ್ಯಾನುಫ್ಯಾಕ್ಚರಿಂಗ್ ಜೋನ್ ಪ್ರಾರಂಭಿಸಲು ಪ್ರಸ್ತಾವನೆ ಬಂದಿದೆಯೇ?

ಇ) ಬೀದರ್‌ನಲ್ಲಿ ಈ ಜೋನ್ ಪ್ರಾರಂಭಿಸಲು ಸೂಕ್ತ ಸ್ಥಳವಿರುವುದರಿಂದ ಈ ಪ್ರಸ್ತಾವನೆಗೆ ಕೇಂದ್ರದಿಂದ ಅನುಮೋದನೆ ಪಡೆಯಲು ಪ್ರಯತ್ನಿಸಲಾಗುವುದೇ?

ಶ್ರೀ ಸಿದ್ಧರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು)

ಅ) ಇಲ್ಲ.ಬೀದರ್ ಜಿಲ್ಲೆಯಲ್ಲಿ 8 ದೊಡ್ಡ ಪ್ರಮಾಣದ ಕೈಗಾರಿಕೆಗಳು ಸ್ಥಾಪಿತವಾಗಿವೆ.

ಆ) ಬೀದರ್ ಜಿಲ್ಲೆಯಲ್ಲಿ ನ್ಯಾಷನಲ್ ಇನ್ಫ್ರಾಸ್ಟ್ರಕ್ಚರ್ ಮ್ಯಾನುಫ್ಯಾಕ್ಚರಿಂಗ್ ಜೋನ್ ಪ್ರಾರಂಭಿಸಲು ಪ್ರಸ್ತಾವನೆ ಬಂದಿದೆ.

ಇ) ಬೀದರ್ ಜಿಲ್ಲೆಯ NIMZ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರದ ತಾತ್ವಿಕ ಅನುಮೋದನೆಗಾಗಿ ಶಿಫಾರಸ್ಸು ಮಾಡಿ ಕಳುಹಿಸಿದೆ.

ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಒದಗಿಸಿದ್ದಾರೆ. ಬೀದರ್ ಜಿಲ್ಲೆಯಲ್ಲಿ National Infrastructure Manufacturing Zone ಗಾಗಿ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರದ ತಾತ್ವಿಕ ಅನುಮೋದನೆಗಾಗಿ ರಾಜ್ಯ ಸರ್ಕಾರ ಶಿಫಾರಸ್ಸು ಮಾಡಿ ಕಳುಹಿಸಿದೆ. ಈ ಯೋಜನೆಯ ಪ್ರಸ್ತಾವನೆ ಕೇಂದ್ರ ಸರ್ಕಾರಕ್ಕೆ ಹೋಗಿದ್ದು, ಎಷ್ಟು ಕಾಲಮಿತಿಯಲ್ಲಿ ಅನುಮೋದನೆ ಪಡೆಯುವುದಕ್ಕೆ ಪ್ರಯತ್ನ ಮಾಡುತ್ತೀರಿ? ಬೀದರ್ ಜಿಲ್ಲೆ ಅತ್ಯಂತ ಹಿಂದುಳಿದ ಜಿಲ್ಲೆಯಾಗಿದ್ದು, ಈ ಯೋಜನೆಯಿಂದ ಎಷ್ಟು ಉದ್ಯೋಗ ಸೃಷ್ಟಿಯಾಗಲಿದೆ? ಎಷ್ಟು ಬಂಡವಾಳ ಬರಲಿದೆ? ಮತ್ತು ಎಷ್ಟು ಭೂಸ್ವಾಧೀನ ಮಾಡಿಕೊಳ್ಳಬೇಕಾಗುತ್ತದೆ?

ಅಧ್ಯಕ್ಷರು : ಇದನ್ನೆಲ್ಲಾ ನೀವು ಪ್ರಶ್ನೆಯಲ್ಲಿ ಕೇಳಿಲ್ಲ.

ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ : ಈ ಪ್ರಶ್ನೆಗಳೆಲ್ಲಾ ಈ ಯೋಜನೆಗೆ ಸಂಬಂಧಪಟ್ಟಿದ್ದು. ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಯವರಿಗೆ ನನ್ನ ಮನವಿ ಏನೆಂದರೆ, ಮೂಲಭೂತ ಸೌಕರ್ಯ ಉತ್ಪಾದನಾ ವಲಯದ ಬಗ್ಗೆ ಕೇಂದ್ರ ಸರ್ಕಾರಕ್ಕೆ ಕಳುಹಿಸಿರುವ ಪ್ರಸ್ತಾವನೆಯನ್ನು ಆದಷ್ಟು ಶೀಘ್ರವಾಗಿ ಅನುಮೋದನೆ ಮಾಡಿ ಅದಕ್ಕೆ ಚಾಲನೆ ಕೊಡಬೇಕು.

ಶ್ರೀ ಸಿದ್ದರಾಮಯ್ಯ : National Infrastructure Manufacturing Zone ಅನ್ನು ಬೀದರ್, ಗುಲ್ಬರ್ಗಾ, ಕೋಲಾರ ಮತ್ತು ತುಮಕೂರು ಜಿಲ್ಲೆಗಳಲ್ಲಿ ಪ್ರಾರಂಭ ಮಾಡಬೇಕೆಂಬ ಯೋಜನೆಯಿದ್ದು, ಈಗಾಗಲೇ ತುಮಕೂರು ಜಿಲ್ಲೆಗೆ ಮಂಜೂರಾಗಿ ಬಂದಿದೆ. ಕೋಲಾರ, ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಗಳ proposal ಕಳುಹಿಸಿದ್ದು, ಮಂಜೂರಾತಿ ಬರಬೇಕಾಗಿದೆ. ಬೀದರ್ ಪ್ರಸ್ತಾವನೆ ಕೂಡ ಕೇಂದ್ರ ಸರ್ಕಾರಕ್ಕೆ ಹೋಗಿದೆ. ಆದಷ್ಟು ಜಾಗ್ರತೆಯಾಗಿ ಇದನ್ನು ಮಾಡಿಕೊಡಬೇಕೆಂದು ಪತ್ರಗಳನ್ನು ಕೂಡ ಬರೆಯುತ್ತಿದ್ದೇವೆ. Norms ಪ್ರಕಾರ ಇದನ್ನು ಮಾಡುವುದಕ್ಕೆ ಸುಮಾರು 12,500 ಎಕರೆ ಜಾಗ ಬೇಕಾಗುತ್ತದೆ. ಇಲ್ಲೂ ಕೂಡ 12,500 ಎಕರೆ ಭೂಮಿ ಬೇಕಾಗುತ್ತದೆಂದು ಗುರುತು ಮಾಡಿ ಆಗಿದೆ. ಬೀದರ್ ಜಿಲ್ಲೆಯಲ್ಲಿ ಈಗಾಗಲೇ ಎಂಟು major industries ಇದ್ದು, National Infrastructure Manufacturing Zone ಕೂಡ ಬಂದರೆ ಬಹಳ ಅನುಕೂಲವಾಗುತ್ತದೆ. ಬೀದರ್ ಜಿಲ್ಲೆಯಲ್ಲಿ ಈ ಜೋನ್ ಮಾಡಿದರೆ ಸುಮಾರು 12,000 ಕೋಟಿ ರೂಪಾಯಿಗಳ ಬಂಡವಾಳ ಬರುತ್ತದೆ, ಒಂದು ಲಕ್ಷ ನೇರ ಉದ್ಯೋಗ ಸಿಗುತ್ತದೆ. ಮತ್ತು ಒಂದುವರೆ ಲಕ್ಷ ಪರೋಕ್ಷವಾದ ಉದ್ಯೋಗ ಸಿಗುತ್ತದೆ. ಆದ್ದರಿಂದ ಇದನ್ನು ಆದಷ್ಟು ಜಾಗ್ರತೆಯಾಗಿ ತರುವುದಕ್ಕೆ ಪ್ರಯತ್ನ ಪಡುತ್ತೇವೆ

ಅಧ್ಯಕ್ಷರು : Good. ಶ್ರೀ ಅರವಿಂದ್ ಚಂದ್ರಕಾಂತ್ ಬೆಲ್ಲದ್ ರವರೆ, ಶ್ರೀ ಈಶ್ವರ ಭೀಮಣ್ಣ ಖಂಡ್ರೆಯವರು ಕೇಳಿರುವ ಪ್ರಶ್ನೆಗೆ ಇನ್ನೂ ಹೆಚ್ಚಿನ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ. ಬೇರೆ ಏನಾದರೂ ಪ್ರಶ್ನೆಯಿದ್ದರೆ ಕೇಳಿ. ಇದು ನಿಮಗೆ ಬರುವುದಿಲ್ಲ. ಬೀದರ್ ಜಿಲ್ಲೆಗೆ ಸಂಬಂಧಪಟ್ಟ ವಿಷಯ.